ಕಟ್ಟಿ, ಇಸ್ಲಾಮಿಕ್ ಪಡಿಯಚ್ಚುಗಳನ್ನೇ ನಂಬುತ್ತಾ, ಹಿಂದೂ ಅಸ್ಮಿತೆಯನ್ನು ಗಟ್ಟಿಯಾಗಿ ಸ್ಥಾಪಿಸಬೇಕೆನ್ನುವ ರೆಟರಿಕ್ಕಿನಲ್ಲಿ ತರ್ಕಕ್ಕಿಂತ ನಂಬಿಕೆಯೇ ಹೆಚ್ಚಾಗಿ ಕಾಣಿಸುತ್ತದೆ. ಆ ನಂಬಿಕೆಯನ್ನು ಪ್ರಚೋದಕವಾದ ಹಾಡುಗಳಾಗಿ ಪರಿವರ್ತಿಸಿ ಜನಪ್ರಿಯವಾಗಿಸುವುದು ಕಷ್ಟವಲ್ಲ. ಇದನ್ನು ಎಡಪಂಥೀಯರೂ ಮಾಡಿದ್ದರು. ತೆಲಂಗಾಣದಲ್ಲಿ ಗದ್ದರ್ 'ಜನನಾಟ್ಯ ಮಂಡಲಿ'ಯ ಮೂಲಕ ಕಟ್ಟಿದ ಕ್ರಾಂತಿಕಾರಿ ಹಾಡುಗಳಲ್ಲಿ ಪ್ರಚೋದಕ ಅಂಶಗಳು ಸಾಕಷ್ಟು ಇದ್ದವು. ಅಲ್ಲಿ ಮಿಲ್ ಮಾಲೀಕ–ಜಮೀಂದಾರರು ಶತ್ರುಗಳಾಗಿ ಬಣ್ಣಿಸಲ್ಪಟ್ಟರೆ, ಕವಿ ಸಿಂಗ್ ಎನ್ನುವ ಹುಡುಗಿಯ ಗಾಯನದಲ್ಲಿ ಕೇವಲ ಹಿಂದೂ ಶ್ರೇಷ್ಠತೆ ಮತ್ತು ಇಸ್ಲಾಂ ವಿರುದ್ಧ ಕಾರುವ ದ್ವೇಷ ಕಾಣುತ್ತದೆ. ಕೇವಲ ಸಾಹಿತ್ಯ ಮಾತ್ರ ಪ್ರಚೋದಕವಾಗಿರುವುದು ಒಂದೆಡೆಯಾದರೆ, ಅದನ್ನು ಹಾಡುವ ರೀತಿ, ಆ ಹಾಡುಗಳನ್ನು ಉಪಯೋಗಿಸುವ ಸಂದರ್ಭ ಅದರ ಪ್ರಭಾವವನ್ನು ಹೆಚ್ಚು ಅಥವಾ ಕಡಿಮೆ ಮಾಡಬಹುದು. ಉದಾಹರಣೆಗೆ, ಫೈಜ್ ಅಹಮದ್ ಫೈಜ್ ಅವರನ್ನು ಜಿಯಾ ಉಲ್ ಹಕ್ ಬಂಧಿಸಿ ಜೈಲಿಗೆ ಕಳುಹಿಸಿದ ಸಂದರ್ಭದಲ್ಲಿ ಫೈಜ್ ಅವರ 'ಹಮ್ ದೇಖೇಂಗೆ' ಹಾಡನ್ನು ಇಕ್ಬಾಲ್ ಬಾನೋ 50,000 ಜನರು ತುಂಬಿದ್ದ ಲಾಹೋರ್ ಸ್ಟೇಡಿಯಂನಲ್ಲಿ ಕಪ್ಪು ಸೀರೆಯುಟ್ಟು (ಜಿಯಾ ಸೀರೆಯನ್ನು ನಿಷೇಧಿಸಿದ್ದರು) ನಿಂತು ಹಾಡಿದಾಗ ಉಂಟಾದ ವಾತಾವರಣ ಎಷ್ಟು ಪ್ರಚೋದನಕಾರಿಯಾಗಿತ್ತೋ (www.youtube.com/watch?v=dxtgsq5oVy4), ಅದೇ ಇಕ್ಬಾಲ್ ಬಾನೋ ಆ ಹಾಡನ್ನು ದೆಹಲಿಯ ಸಿರಿ ಫೋರ್ಟ್ ಆಡಿಟೋರಿಯಂನಲ್ಲಿ ಕುಳಿತು ಹಾಡಿದಾಗ ವಾತಾವರಣ ಅಷ್ಟೇ ಶಾಂತವಾಗಿತ್ತು ಎನ್ನುವುದನ್ನು ಗಮನಿಸಬೇಕು (www.youtube.com/watch?v=IYbSVlCS0-g). ಇದೇ ರೀತಿಯಲ್ಲಿ ರಾಮನವಮಿಯ ಮೆರವಣಿಗೆಯ ಸಂದರ್ಭದಲ್ಲಿ ಮಸೀದಿಯ ಮುಂದೆ ಈ ರೀತಿಯ ಹಾಡುಗಳನ್ನು ಗಟ್ಟಿಸಂಗೀತದೊಂದಿಗೆ ನುಡಿಸುವ ಪ್ರಚೋದನಕಾರಿ ಕೃತ್ಯಗಳಿಗೆ ಕವಿ ಸಿಂಗ್ ಮೂಲಗ್ರಾಸವನ್ನು ಒದಗಿಸುವ ಯುವತಿಯಾಗಿ ಕಾಣುತ್ತಾಳೆ. ಕವಿ ಸಿಂಗ್ ಗಂಡ ಮತ್ತು ಅವಳನ್ನು ದತ್ತು ಪಡೆದ ತಂದೆ ಅವಳ ವೃತ್ತಿಯನ್ನು ನಿರ್ವಹಿಸುತ್ತಾರೆ. ಅವಳನ್ನು ರಾಜಕೀಯಕ್ಕೆ ಇಳಿಸಬೇಕು ಎನ್ನುವುದು ಅವಳ ತಂದೆಯ ಆಶಯ.

ಕಮಲ್ ಅಗ್ನೇಯ್ ಒಬ್ಬ ಕವಿ. ಯಾವುದೇ ಕಾರ್ಯಕ್ರಮದಲ್ಲಿ ತನ್ನ ಕವಿತೆಗಳನ್ನು – ಮೊದಲಿಗೆ ಮೃದು ಮಟ್ಟದಲ್ಲಿ ಲೇವಡಿಯ ರೂಪದಲ್ಲಿ ವಿಚಾರಧಾರೆಯನ್ನು ಮಂಡಿಸುತ್ತಾನೆ. ಶ್ರೋತೃಗಳ ಪ್ರತಿಕ್ರಿಯೆ ಸರಿಯಾಗಿದ್ದರೆ, ಲೇವಡಿಯನ್ನು ದ್ವೇಷದತ್ತ ಒಯ್ಯುತ್ತಾ ವಿಚಾರಧಾರೆಯನ್ನು ಪ್ರಸಾರ ಮಾಡುತ್ತಾನೆ. ರಾಜಕೀಯ ನಾಯಕರ ರ‍್ಯಾಲಿಗಳಲ್ಲಿ, ಭಾಷಣಗಳು ಪ್ರಾರಂಭವಾಗುವುದಕ್ಕೆ ಮುನ್ನ ವಾತಾವರಣವನ್ನು ಗರಮಾಯಿಸುವುದಕ್ಕೆ ಕಮಲ್‌ನನ್ನು ಜನ ಆಹ್ವಾನಿಸುತ್ತಾರೆ. ಎಷ್ಟು ಕಟುವಾಗಿ ಅಥವಾ ಪ್ರಬುದ್ಧವಾಗಿ ಕವಿತೆಗಳಿರಬೇಕು, ಹೇಗೆ ವಾತಾವರಣವನ್ನು ಸೃಷ್ಟಿ ಮಾಡಬೇಕು ಎನ್ನುವುದರ ಬಗ್ಗೆ ಕಮಲ್‌ಗೆ ಮೊದಲೇ ಸೂಚನೆಗಳಿರುತ್ತವೆ. ಹೀಗಾಗಿ ಒಟ್ಟಾರೆ ಹಿಂದುತ್ವದ ವಾತಾವರಣವನ್ನು ಸೃಷ್ಟಿಸುವುದಕ್ಕೆ, ನಾಯಕರು ಬಂದು ಉಗುಳುವ ದ್ವೇಷದ ಭಾಷಣಗಳಿಗೆ ತಕ್ಕ ಮೂಡನ್ನು ಈ ರೀತಿಯಾಗಿ ತಯಾರು ಮಾಡಲಾಗುತ್ತದೆ.

ಸಂದೀಪ್ ದೇವ್ ತನ್ನದೇ ಯೂಟ್ಯೂಬ್ ಚಾನಲ್ಲನ್ನು ನಿರ್ವಹಿಸುತ್ತಾನೆ. ಜೊತೆಗೆ ಪುಸ್ತಕ ಪ್ರಕಾಶನ, ವೆಬ್‌ಸೈಟ್ ಮೂಲಕ ಹಿಂದುತ್ವವಾದಿ ಪುಸ್ತಕಗಳ ಮಾರಾಟ – ಹೀಗೆ ಬಲಪಂಥೀಯ ಸಾಹಿತ್ಯವನ್ನು ಪ್ರಸಾರ ಮಾಡುವ ಕೆಲಸವನ್ನು ಮಾಡುತ್ತಾನೆ. ಯೂಟ್ಯೂಬ್ ಚಾನಲ್‌ನಲ್ಲಿ ರಾಷ್ಟ್ರಭಕ್ತಿಯ ಮತ್ತು ಹಿಂದೂ ಔನ್ನತ್ಯದ ಮಾತನ್ನು ಆಡುತ್ತಾನೆ. ಬಲಪಂಥೀಯವಾಗಿ ಹಿಂದುತ್ವದೆಡೆಗೆ ವಾಲಿದ್ದರೂ, ಸರ್ಕಾರವನ್ನು ಟೀಕಿಸುತ್ತಾ, ತನ್ನ ಸ್ವತಂತ್ರ ವ್ಯಕ್ತಿತ್ವವನ್ನು, ವಸ್ತುನಿಷ್ಠತೆಯನ್ನು ತೋರಿಸಲು ಪ್ರಯತ್ನಿಸುತ್ತಾನಾದರೂ, ಅವನ ಒಲವು ಸರ್ಕಾರದ ನಿಲುವಿಗಿಂತ ಅತಿರೇಕದ್ದು ಎನ್ನುವುದು ನಮಗೆ ಗೊತ್ತಾಗುತ್ತದೆ.

ಜನಪ್ರಿಯ ಮಾಧ್ಯಮಗಳನ್ನು ಈ ರೀತಿಯಾಗಿ ಬಲಪಂಥೀಯ ವಿಚಾರಧಾರೆ ಆಕ್ರಮಿಸಿಕೊಂಡು, ಆ ವಿಚಾರಧಾರೆಗೆ ಪೂರಕವಾದ ವಾತಾವರಣವನ್ನು ಸೃಷ್ಟಿಸುವಲ್ಲಿ ಯಶಸ್ವಿ ಪ್ರಯತ್ನಗಳು ನಡೆಯುತ್ತಿವೆ ಎನ್ನುವುದನ್ನು ಪುರೋಹಿತ್ ತಮ್ಮ ಪುಸ್ತಕದ ಮೂಲಕ ನಿರೂಪಿಸುತ್ತಾರೆ. ಈ ವಿಚಾರಧಾರೆ ಹಬ್ಬಲು ಸರ್ಕಾರದ ನೇರ ಸಹಾಯವಿಲ್ಲದಿದ್ದರೂ, ಸರ್ಕಾರವನ್ನು ನಡೆಸುವ